# ಸಂಸ್ಕೃತಿ ಸಬಲೀಕರಣ

ಬದಲಾವಣೆ ತೀವ್ರಗತಿಯಲ್ಲಿರುವ ಸಮಾಜದಲ್ಲಿ ನೂರಾರು ಸಣ್ಣ ಸಣ್ಣ ಸಮುದಾಯಗಳು, ಕೆಳಜಾತಿಗಳು ಅನುಭವಿಸುತ್ತಿರುವ ಅವ್ಯಕ್ತ ಯಾತನೆಯೆಂದರೆ 'ಸಾಂಸ್ಕೃತಿಕ ಮರೆವು'. ಮೇಲು ನೋಟಕ್ಕೆ ಸಿಹಿಯಂತಿರುವ ಈ 'ಸಾಂಸ್ಕೃತಿಕ ಮರೆವು' ತನ್ನೊಳಗೆ ಬಹುತ್ವವನ್ನು ನಾಶ ಮಾಡುವ ವಿಧ್ವಂಸಕದ ಗುಣವನ್ನು ಹೊಂದಿದೆ. ಕೆಳ ಸಮುದಾಯಗಳು ತಮ್ಮ ಪೂರ್ವಿಕರು ಕಟ್ಟಿರುವ ಸಂಸ್ಕೃತಿಯ ಸಬಲೀಕರಣವನ್ನು ಸಡಿಲಗೊಳಿಸುವತ್ತ ಹೆಜ್ಜೆ ಇಡುತ್ತಿದೆ. ಈ ತಿರಸ್ಕಾರ ಸಾಮಾಜಿಕ ಮತ್ತು ಧಾರ್ಮಿಕ ವಲಯವನ್ನೂ ದಾಟಿಕೊಂಡು, ಕಲೆಗಳ ವ್ಯಾಪ್ತಿಗೂ ಹಬ್ಬಿರುವುದು ಸೋಜಿಗದ ವಿಷಯ! 'ಸಂಸ್ಕೃತಿ ಎಂಬುದು ಒಂದು ಸಮುದಾಯದ ಇತಿಹಾಸದ ಪ್ರತಿನಿಧಿ' ಎಂಬುದನ್ನೇ ಮರೆತಿರುವ ಈ ಸಮುದಾಯಗಳು ತಮ್ಮದಲ್ಲದ ಸಂಸ್ಕೃತಿಯನ್ನು ತಲೆಮೇಲೆ ಹೊತ್ತು ಮೆರೆಸುತ್ತಿರುವುದು ಎಲ್ಲೆಡೆ ಸಾಮಾನ್ಯ ಸಂಗತಿಯಾಗಿದೆ. ಇದನ್ನು ಮಾನವಶಾಸ್ತ್ರಜ್ಞರು 'ಸಾಂಸ್ಕೃತಿಕ ಗುಲಾಮಗಿರಿ' ಎಂದು ಕರೆಯುತ್ತಾರೆ.

ನಮ್ಮ ಗ್ರಾಮೀಣ ಸಮಾಜದಲ್ಲಿ ಇದುವರೆಗೂ ಬಯಲು ಅಥವಾ ಚಾವಡಿಗಳಲ್ಲಿ ನೆಲೆಸಿದ್ದ ಮುಳಕಟ್ಟಮ್ಮ, ಜಲದಿಗೆರಮ್ಮ, ಗೌರಸಂದ್ರದ ಮಾರಮ್ಮ, ಬಿಕ್ಕಲಮ್ಮ ಮುಂತಾದ ನೂರಾರು ಮಾರಮ್ಮಗಳು ಇಂದು ಬದಲಾವಣೆಗೆ ಒಳಪಟ್ಟು, 'ಆದಿಪರಾಶಕ್ತಿ ದೇವಿ' ಎಂದು ಹೆಸರು ಬದಲಾಯಿಸಿಕೊಂಡು ಕೋಟಿಗಟ್ಟಲೆ ಬೆಲೆಬಾಳುವ ದೇವಾಲಯಗಳಿಗೆ ಪ್ರವೇಶ ಪಡೆಯುತ್ತಿವೆ. ಮಧ್ಯ ಕರ್ನಾಟದಲ್ಲಿ ಹಿಂದೆ ಹಟ್ಟಿ ತಿಪ್ಪಯ್ಯನ ಪರಿಸೆ (ನಾಯಕನಹಟ್ಟಿ ತಿಪ್ಪೇಸ್ವಾಮಿ) ಪ್ರಖ್ಯಾತವಾಗಿತ್ತು. ಜನರು ತಮ್ಮ ಆಹಾರವನ್ನೇ ಹಟ್ಟಿ ತಿಪ್ಪಯ್ಯನಿಗೂ ಎಡೆ ಇಡುತ್ತಿದ್ದರು. ಇದೀಗ ಹಟ್ಟಿ ತಿಪ್ಪಯ್ಯ 'ಶ್ರೀ ಶ್ರೀ ತಿಪ್ಪೇರುದ್ರ ಮಹಾಸ್ವಾಮಿ' ಎಂದು ಸಂಸ್ಕೃತೀಕರಣಗೊಂಡಿದ್ದಾನೆ. ಹೆಸರಿನ ಜೊತೆ ಪರಿಸೆಯಲ್ಲಿ ಆಚರಣೆಯಲ್ಲಿದ್ದ ಆಹಾರ ಪದ್ಧತಿಯೂ ಬದಲಾಗಿದೆ! ಇದೇ ರೀತಿ ಹತ್ಯಾಳು ನರಸಿಂಹಸ್ವಾಮಿಯ ಗುಡ್ಡದಲ್ಲಿ ನಡೆಯುತ್ತಿದ್ದ ಆಹಾರದ ಆಚರಣೆಯೂ ಸಂಸ್ಕೃತೀಕರಣಗೊಂಡಿದೆ. ಹೀಗೆಯೇ ಕರಾವಳಿ ಭಾಗದ ಜನಪದ ಕಲೆಗಳು, ಜನಪದರ ದೈವಗಳು ಮೇಲು ಸಂಸ್ಕೃತಿಯ ಅನುಕರಣೆಗೆ ಒಳಗಾಗಿವೆ. ಕೆಳ ಸಮುದಾಯಗಳು ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಕಳೆದುಕೊಳ್ಳುವುದು ಎಂದರೆ, ಅದು ತಮ್ಮ ಸ್ವಾತಂತ್ರ್ಯ ಮತ್ತು ಸೃಜನಶೀಲತೆಯನ್ನೇ ಕಳೆದುಕೊಂಡಂತೆ! ಕೆಳ ಸಮುದಾಯಗಳು 'ಅವರಂತಾಗುವುದು' ಮಾತ್ರವಲ್ಲ, ತಮ್ಮ ತಮ್ಮ ದೈವಗಳನ್ನೂ ಮೇಲು ಸಂಸ್ಕೃತಿಯ ಖಾತೆಗೆ ವರ್ಗಾವಣೆ ಮಾಡಿವೆ. ಸಂಸ್ಕೃತಿ ಚಲನಶೀಲವಾದದ್ದು ಎಂದು ಹೇಳುವಾಗಲೂ ಸಮುದಾಯಗಳು ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನೇ ಮಸುಕುಗೊಳಿಸುವ ಈ ರೀತಿಯ ಪಲ್ಲಟಗಳಿಗೆ ಒಡ್ಡಿಕೊಳ್ಳಬೇಕೆ ಎಂಬುದು ಪ್ರಶ್ನೆ!

ಈ ದೇಶದ ಏಕರೂಪ ಚಿಂತನಾ ಕ್ರಮವೊಂದು, ಇಲ್ಲಿನ ಎಲ್ಲ ಭಾಷೆ, ಸಂಸ್ಕೃತಿ, ಆಚರಣೆಗಳನ್ನು 'ಒಂದೇ ಸಂಸ್ಕೃತಿ, ಒಂದೇ ದೇಶ' ಎಂದು ಎಲ್ಲವನ್ನೂ ಒಟ್ಟಿಗೆ ಅಲುಗಾಡದಂತೆ ಬಿಗಿಮಾಡಿದೆ. ಈ ಮೂಲಕ ಏಕರೂಪ ಸಂಸ್ಕೃತಿಯು ಇಲ್ಲಿನ ಪ್ರಾದೇಶಿಕ ಸಂಸ್ಕೃತಿ, ಪ್ರಾದೇಶಿಕ ದೈವ ಹಾಗೂ ಭಾಷೆಗಳ ಕೊರಳು ಹಿಸುಕುತ್ತಿದೆ. ಹಲವು ಧರ್ಮ, ನೂರಾರು ಸಂಸ್ಕೃತಿ ಹಾಗೂ ನೂರಾರು ಭಾಷೆಗಳನ್ನು ಒಳಗೊಂಡು, ಅವುಗಳನ್ನೆಲ್ಲಾ ಸಮತೋಲನದಿಂದ ರಕ್ಷಿಸುತ್ತಿರುವ ಈ ದೇಶದ ಪ್ರಾಣಶಕ್ತಿಯೇ ಬಹುತ್ವ ಎಂಬುದನ್ನು ವರ್ತಮಾನದ ಸಮಾಜ ಮರೆತಂತೆ ಕಾಣುತ್ತಿದೆ. ಆಶ್ಚರ್ಯದ ಸಂಗತಿ ಎಂದರೆ, ಕೆಳ ಸಮುದಾಯಗಳಿಗೆ ಈಗ ನಡೆಯುತ್ತಿರುವ ಸಾಂಸ್ಕೃತಿಕ 'ಏಕೀಕರಣ'ದ ಬಗ್ಗೆ ಎಚ್ಚರವಿಲ್ಲದಿರುವುದು! ಇದನ್ನೇ ಬಹು ಹಿಂದೆ ಎ.ಕೆ. ರಾಮಾನುಜನ್ 'ಮಹಾಕಾವ್ಯ'ಗಳ ಏಕ ಪಠ್ಯವನ್ನು ನಿರಾಕರಿಸಿ, 'ರಾಮಾಯಣ ಮತ್ತು ಮಹಾಭಾರತ'ದ ಬಹುಪಠ್ಯಗಳನ್ನು ನಮ್ಮ ಮುಂದಿಟ್ಟು, 'ಭಾರತೀಯವೆನ್ನುವ ಒಂದು ಚಿಂತನಾಕ್ರಮ ಇದೆಯೇ?' ಎಂದು ಪ್ರಶ್ನಿಸಿದ್ದರು. ಇದೇ ಪ್ರಶ್ನೆಯನ್ನು ನಾವು ಸ್ಪಷ್ಟವಾಗಿ 'ಒಂದೇ ಎನ್ನುವ ಭಾರತೀಯ ಸಂಸ್ಕೃತಿ ಎಂದಾದರೂ ಇತ್ತೇ?' ಎಂದು ಕೇಳಬಹುದು. ನೂರಾರು ತಳ ಸಂಸ್ಕೃತಿಗಳ ಇರುವಿಕೆಯನ್ನು ಒಂದು ರೂಪಕದಲ್ಲಿ ವಿವರಿಸಿಕೊಂಡರೆ; 'ವಾಮನ ತನ್ನ ಪಾದಗಳ ಮೂಲಕ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದಂತೆ!' ಕಾಣುತ್ತಿದೆ. ಪುರಾಣದಲ್ಲಿ ಉಲ್ಲೇಖವಾಗಿರುವ ಈ ಘಟನೆಯು ವರ್ತಮಾನದ ಸಮಾಜದಲ್ಲಿ ಕೆಳಜಾತಿ, ಕೆಳಸಮುದಾಯಗಳ ಸಾಂಸ್ಕೃತಿಕ ದಮನೀಕರಣಕ್ಕೆ ಒಂದು ರೂಪಕದಂತಿದೆ.

ಸಮಾಜದ ಎಲ್ಲ ರೂಪಗಳೂ ಸಂಸ್ಕೃತೀಕರಣದ ಪರವಾಗಿಯೇ ಇರುವಾಗ, ನಾವು ಯಾವುದರ ಪರವಾಗಿ ನಿಲ್ಲುವುದು? ಈಗ ನಿಸರ್ಗಪರವಾದ, ಲೋಕಕಾರುಣ್ಯದ ಬಹುಸಂಸ್ಕೃತಿಗಳ ಪರಂಪರೆ ಮತ್ತು ಏಕರೂಪ ಸಂಸ್ಕೃತಿಗಳ ನಡುವೆ ತೀವ್ರವಾದ ಸೆಣಸಾಟವಿದೆ. ಇದೊಂದು ಸಾಮಾಜಿಕ ಮತ್ತು ಧಾರ್ಮಿಕ ಸೆಣೆಸಾಟ ಮಾತ್ರವಲ್ಲ! ಎಲ್ಲವನ್ನೂ ಒಂದೇ ಕಟ್ಟಿಗೆ ತರುವ ಶಕ್ತಿಗಳ ಮೇಲಾಟವೂ ಆಗಿದೆ ಎಂಬುದನ್ನು ನಿರಾಕರಿಸಲಾಗದು.

ಏಕರೂಪ ಸಂಸ್ಕೃತಿಯ ಬಿಗಿಮುಷ್ಟಿಯಿಂದ ವಿಮೋಚನೆ ಪಡೆಯುವುದರಲ್ಲಿಯೇ ತಮ್ಮ ಅಸ್ತಿತ್ವವಿದೆ ಎಂಬುದನ್ನು ಸಣ್ಣ ಸಣ್ಣ ಸಮುದಾಯಗಳು ಅರಿಯಬೇಕಿದೆ. ನಮ್ಮ ಶರಣರು, ತತ್ವಪದಕಾರರು, ಸಿದ್ಧ ಸಾಧಕರ ಶ್ರಮಣಧಾರೆಗಳು ಈ ಸಾಂಸ್ಕೃತಿಕ ವಿಮೋಚನೆಯ ಫಲಗಳೇ ಎಂಬುದನ್ನು ಮರೆಯುವಹಾಗಿಲ್ಲ! ಆಶ್ಚರ್ಯದ ಸಂಗತಿ ಎಂದರೆ, ಈ ಸಮಸ್ಯೆ ಸೋಲಿಗ, ಕಾಡುಗೊಲ್ಲ, ಮ್ಯಾಸನಾಯಕ, ಕುಣುಬಿ ಮುಂತಾದ ಬೆರಳೆಣಿಕೆಯ ಬುಡಕಟ್ಟು ಸಮುದಾಯಗಳಿಗಿಲ್ಲ. ಈ ಬುಡಕಟ್ಟು ಸಮುದಾಯಗಳು ತೀವ್ರಗತಿಯಲ್ಲಿರುವ ಸಂಸ್ಕೃತೀಕರಣದ ವೇಗವನ್ನು ಕೊಂಚಮಟ್ಟಿಗಾದರೂ ತಡೆದಿವೆ (ಕೆಲವು ತೆಳುವಾದ ಬದಲಾವಣೆಗಳನ್ನು ಹೊರತುಪಡಿಸಿ). ಈ ಬುಡಕಟ್ಟು ಸಮುದಾಯಗಳು ಒಂದು ಇನ್ನೊಂದರಲ್ಲಿ ಲೀನವಾಗುವ ಸಡಿಲ ಸಾಂಸ್ಕೃತಿಕ ನಡಾವಳಿಗಳನ್ನು, ಆಚರಣೆಗಳನ್ನು ಹೊಂದಿಲ್ಲ. ಈ ಕಾರಣದಿಂದಾಗಿ ತಮ್ಮ ಸಾಂಸ್ಕೃತಿಕ ಆಚರಣೆ ಮತ್ತು ನಂಬಿಕೆಗಳಲ್ಲೇ ಬುಡಕುಟ್ಟು ಸಮುದಾಯಗಳು ಪ್ರತ್ಯೇಕವಾಗಿಯೇ ಇಂದಿಗೂ ಉಸಿರಾಡುತ್ತಿವೆ. ಇದನ್ನೇ ಆಫ್ರಿಕನ್ ಚಿಂತಕರು 'ಸಾಂಸ್ಕೃತಿಕ ಸಬಲೀಕರಣ' ಎನ್ನುತ್ತಾರೆ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಮಾತು ಮನಸ್ಸುಗಳನ್ನು ಒಂದುಗೂಡಿಸಬೇಕೇ ಹೊರತು ಒಡೆಯಬಾರದು.
  —ಮಾಸ್ತಿ
- ಇವತ್ತಿನ ಹಾರೈಕೆ, ನಾಳಿನ ಪೂರೈಕೆ, ಇಂದಿನ ಕನಸು, ನಾಳೆಯ ನನಸು.
  —ಕುವೆಂಪು
- ದುಡಿಮೆಯಲ್ಲಿ ಸೇವಾ ಬುದ್ಧಿಯಿರಲಿ.
  —ಸರ್. ಎಂ. ವಿಶ್ವೇಶ್ವರಯ್ಯ
- ಉತ್ತಮ ಶಿಕ್ಷಣದ ಉದ್ದೇಶವೆಂದರೆ ಕೇವಲ ಕಲಿಸುವುದಲ್ಲ, ಕಲಿಯುವ ಆಸೆಯನ್ನೂ ಹುಟ್ಟಿಸುವುದು.
  —ಮಹಾತ್ಮ ಗಾಂಧಿ
- ನೀತಿಯ ನೆಲೆಗಟ್ಟಿಲ್ಲದ ವಾದವು ಮಾತಿನ ವ್ಯಭಿಚಾರ.
  —ಎಸ್.ಎಲ್. ಭೈರಪ್ಪ
- ಧನವಿದ್ದವರೇ ಧನಿಕರಲ್ಲ, ಜ್ಞಾನವೇ ಧನದ ನಿಧಿ.
  —ಪಂಡಿತ ತಾರಾನಾಥ
- ಪ್ರತಿಭೆಗೆ ಶಾಸ್ತ್ರ ಜ್ಞಾನವಿದ್ದರೆ ವಜ್ರಕ್ಕೆ ಕುಂದಣವಿಟ್ಟಂತೆ.
  —ತ.ರಾ.ಸು
- ಜೀವನ ಒಂದು ನಾಟಕವಿದ್ದಂತೆ. ಅದರಲ್ಲಿ ವಿಶ್ರಮಿಸಲು ಸೈಡ್ ವಿಂಗ್‌ಗಳಿಲ್ಲ.
  —ಟಿ.ಪಿ. ಕೈಲಾಸಂ